ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಅಧೀಕ್ಷಕ ಅಭಿಯಂತರರು (ಯೋಜನೆ–ಕೇಂದ್ರ) ರವರ ಕಛೇರಿ, ನೆಲ ಮಹಡಿ, ಅನೆಕ್ಸ್ ಕಟ್ಟಡ–2, ನರಸಿಂಹರಾಜ ಚೌಕ, ಬೆಂಗಳೂರು–560002.

****

ಸಂ: SE(PC)/TS/ 23 /2023-24 ದಿನಾಂಕ: 18 – 12 – 2023

ತಾಂತ್ರಿಕ ಮಂಜೂರಾತಿ

ವಿಷಯ:– Renovation of BBMP Special Commissioner (Health) Chamber in BBMP Head office Premises, Bengaluru ಕಾಮಗಾರಿಯ ಅಂದಾಜುಪಟ್ಟಿಗೆ ತಾಂತ್ರಿಕ ಮಂಜೂರಾತಿ ನೀಡುವ ಬಗ್ಗೆ.

ಉಲ್ಲೇಖ: 1. ಮಾನ್ಯ ಮುಖ್ಯ ಆಯುಕ್ತರು ರವರ ಅಧಿಕಾರ ಪ್ರತ್ಯಾಯೋಜನೆ ಸಂಖ್ಯೆ: ಬಿ12(1)/ಪಿಆರ್/394 /2021–22 ದಿನಾಂಕ: 18.01.2022.

2. ವಾರ್ಡ್ ಮಟ್ಟದ ಲೋಕೋಪಯೋಗಿ ಕಾಮಗಾರಿ, ನಗರ ಯೋಜನೆ ಹಾಗೂ ಮೂಲ ಸೌಕರ್ಯ ಸ್ಥಾಯಿ ಸಮಿತಿ ಹಾಗೂ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸಭೆಯ ಅಧಿಕಾರಗಳನ್ನು ಚಲಾಯಿಸಿ, ಮಾನ್ಯ ಆಡಳಿತಗಾರರು ವಿಷಯದ ಸಂಖ್ಯೆ: 95/2023–24, ದಿನಾಂಕ: 20.10.2023 ರಂದು ಅನುಮೋದನೆ ನೀಡಿರುವ ನಡವಳಿ.

3. ಕಾರ್ಯಪಾಲಕ ಅಭಿಯಂತರರು (ಎಂಪಿಇಡಿ–ಕೇಂದ್ರ) ರವರ ಆಡಳಿತಾತ್ಮಕ ಮಂಜೂರಾತಿ ಮೆಮೋ ಸಂಖ್ಯೆ: EE/MPED-C/AS/04/2023-24, ದಿನಾಂಕ: 06.12.2023.

****

ಪ್ರಸ್ತಾವನೆ:–

ಕಾರ್ಯಪಾಲಕ ಅಭಿಯಂತರರು (ಎಂಪಿಇಡಿ–ಕೇಂದ್ರ) ರವರು ಮೇಲ್ಕಂಡ ಕಾಮಗಾರಿಯ ರೂ. 65.00 ಲಕ್ಷಗಳು (ಅರವತ್ತೈದು ಲಕ್ಷ ರೂಪಾಯಿಗಳು ಮಾತ್ರ) ಮೊತ್ತದ ಅಂದಾಜು ಪಟ್ಟಿಗೆ ತಾಂತ್ರಿಕ ಮಂಜೂರಾತಿ ಕೋರಿದ್ದು, ಈ ಸಂಬಂಧ ವಾರ್ಡ್ ಮಟ್ಟದ ಲೋಕೋಪಯೋಗಿ ಕಾಮಗಾರಿ, ನಗರ ಯೋಜನೆ ಹಾಗೂ ಮೂಲ ಸೌಕರ್ಯ ಸ್ಥಾಯಿ ಸಮಿತಿ ಹಾಗೂ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸಭೆಯ ಅಧಿಕಾರಗಳನ್ನು ಚಲಾಯಿಸಿ, ಮಾನ್ಯ ಆಡಳಿತಗಾರರು ಉಲ್ಲೇಖ–(2)ರ ವಿಷಯ ಸಂಖ್ಯೆ: 95/2023–24 ರ ದಿನಾಂಕ: 20.10.2023ರ ನಡವಳಿಗಳಲ್ಲಿ ಲೆಕ್ಕ ಶೀರ್ಷಿಕೆ: 05–400201, ಪಿ–3893ರ ಅನುದಾನದಡಿಯಲ್ಲಿ ಸದರಿ ಕಾಮಗಾರಿಯನ್ನು ಕೈಗೊಳ್ಳಲು ಆಡಳಿತಾತ್ಮಕ ಅನುಮೋದನೆ ನೀಡಿರುತ್ತಾರೆ. ಅದರಂತೆ ರೂ. 65.00 ಲಕ್ಷಗಳು (ಅರವತ್ತೈದು ಲಕ್ಷ ರೂಪಾಯಿಗಳು ಮಾತ್ರ) ಮೊತ್ತದ ಅಂದಾಜು ಪಟ್ಟಿಗೆ ಕಾರ್ಯಪಾಲಕ ಅಭಿಯಂತರರು (ಎಂಪಿಇಡಿ–ಕೇಂದ್ರ) ರವರು ಉಲ್ಲೇಖ–(3)ರಂತೆ ದಿನಾಂಕ: 06.12.2023 ರಂದು ಆಡಳಿತಾತ್ಮಕ ಮಂಜೂರಾತಿ ಮೆಮೋ ಹೊರಡಿಸಿರುತ್ತಾರೆ ಹಾಗೂ ಅಂದಾಜುಪಟ್ಟಿಗೆ ತಾಂತ್ರಿಕ ಮಂಜೂರಾತಿ ನೀಡಲು ಕೋರಿರುತ್ತಾರೆ. ಮಾನ್ಯ ಮುಖ್ಯ ಆಯುಕ್ತರು ರವರ ಕಛೇರಿ ಆದೇಶ ಸಂಖ್ಯೆ: ಬಿ12(1)ಪಿ.ಆರ್/394/2021–22 ದಿನಾಂಕ: 18.01.2022 ರಲ್ಲಿ ರೂ.20.00 ಲಕ್ಷಕ್ಕಿಂತ ಹೆಚ್ಚಿನ ಮೊತ್ತದಿಂದ ರೂ. 100.00 ಲಕ್ಷ ವರೆಗಿನ ಕಾಮಗಾರಿಯ ಅಂದಾಜು ಪಟ್ಟಿಗೆ ತಾಂತ್ರಿಕ ಮಂಜೂರಾತಿ ನೀಡುವ ಅಧಿಕಾರವನ್ನು ಅಧೀಕ್ಷಕ ಅಭಿಯಂತರರಿಗೆ ಪ್ರತ್ಯೋಜಿಸಲಾಗಿರುತ್ತದೆ.

ಆದುದರಿಂದ ಈ ಕೆಳಕಂಡ ಆದೇಶ.

ಆದೇಶ

ಪ್ರಸ್ತಾವನೆಯಲ್ಲಿ ವಿವರಿಸಿರುವಂತೆ "Renovation of BBMP Special Commissioner (Health) Chamber in BBMP Head office Premises, Bengaluru" ಕಾಮಗಾರಿಯನ್ನು ಕೈಗೊಳ್ಳಲು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ 2023–24ನೇ ಸಾಲಿನ ಆಯವ್ಯಯದ ಲೆಕ್ಕ ಶೀರ್ಷಿಕೆ: 05–400201, ಪಿ–3893ರ ಅಡಿಯಲ್ಲಿ ರೂ. 65.00 ಲಕ್ಷಗಳು (ಅರವತ್ತೈದು ಲಕ್ಷ ರೂಪಾಯಿಗಳು ಮಾತ್ರ) ಮೊತ್ತದ ಅನುದಾನ ಮಂಜೂರಾಗಿರುತ್ತದೆ.

ಆದ ಕಾರಣ ಮೇಲ್ಕಂಡ ಕಾಮಗಾರಿಯ ರೂ. 65.00 ಲಕ್ಷಗಳು (ಅರವತ್ತೈದು ಲಕ್ಷ ರೂಪಾಯಿಗಳು ಮಾತ್ರ) ಮೊತ್ತದ ಅಂದಾಜು ಪಟ್ಟಿಗೆ ಈ ಕೆಳಕಂಡ ನಿಬಂಧನೆಗಳಿಗೆ ಒಳಪಟ್ಟು ತಾಂತ್ರಿಕ ಮಂಜೂರಾತಿ ನೀಡಲಾಗಿದೆ. ಈ ತಾಂತ್ರಿಕ ಮಂಜೂರಾತಿಯನ್ನು ಅಧೀಕ್ಷಕ ಅಭಿಯಂತರರು (ಯೋಜನೆ ಕೇಂದ್ರ) ರವರ ದಾಖಲು ಪಟ್ಟಿ ಸಂಖ್ಯೆ: **SE(PC)/TS/23/23-24,** ದಿನಾಂಕ: 18-12-2023ರಲ್ಲಿ ನೊಂದಾಯಿಸಲಾಗಿದೆ.

ತಾಂತ್ರಿಕ ನಿಬಂಧನೆಗಳು :

1. ಪ್ರಸ್ತಾಪಿತ ಅಂದಾಜುಪಟ್ಟಿಯಲ್ಲಿ ಅಳವಡಿಸಿಕೊಂಡಿರುವ ವಿಶಿಷ್ಟ ವಿವರಣೆ / ವಿಶಿಷ್ಟತೆ ಸ್ಥಳಕ್ಕೆ ಅನುಗುಣವಾಗಿ ಕಾಮಗಾರಿಯನ್ನು ನಿರ್ವಹಿಸುವುದು.
2. ಕಾಮಗಾರಿಯನ್ನು ಮೌಲ್ಯ ಪ್ರಮಾಣ ವಿವರಣೆಯ (Standard Specification) ಪ್ರಕಾರ ನಿರ್ವಹಿಸತಕ್ಕದ್ದು.
3. ಪ್ರಸ್ತಾಪಿತ ಕಾಮಗಾರಿಯ ಅಂದಾಜು ಪಟ್ಟಿಯಲ್ಲಿ ಅಳವಡಿಸಿಕೊಂಡಿರುವ ಅನುಪಯುಕ್ತ (ಡೆಬಿರಿಸ್) ವಸ್ತುಗಳ ಸಾಗಾಣಿಕೆ ಪೂರಕವಾಗಿ ಅನುಮೋದಿತ (Notified Dumping Yard) ಗೆ ಅನುಗುಣವಾಗಿ ಕಾಮಗಾರಿಯನ್ನು ನಿರ್ವಹಿಸುವ ಸ್ಥಳದಿಂದ Dumping Yard ಗೆ ಇರುವ ಅಂತರಕ್ಕೆ ಸಂಬಂಧಿಸಿದಂತೆ, Lead chart ಅನ್ನು ತಯಾರಿಸಿ ಅನುಮೋದನೆ ಪಡೆದುಕೊಳ್ಳುವುದು.
4. Non S.R. ದರಗಳಿಗೆ ಸಕ್ಷಮ ಪ್ರಾಧಿಕಾರದಿಂದ ಅನುಮೋದನೆ ಪಡೆಯುವುದು.
5. ಪ್ರಸ್ತಾಪಿತ ಕಾಮಗಾರಿಗೆ ಸಂಬಂಧಿತ ನಕ್ಷೆಗಳಿಗೆ ವಿನ್ಯಾಸಗಳನ್ನು ಪಡೆದು ಕಾಮಗಾರಿಯನ್ನು ನಿರ್ವಹಿಸುವುದು.
6. ಕಾಮಗಾರಿಯ ಎಲ್ಲಾ ಹಂತದಲ್ಲಿನ ಕಾಮಗಾರಿ ಪೂರ್ವ / ಪ್ರಗತಿ / ಪೂರ್ಣಗೊಂಡ ಛಾಯ ಚಿತ್ರಗಳನ್ನು ಲಗತ್ತಿಸುವುದು.
7. ಅಂದಾಜಿನಲ್ಲಿ ಅಳವಡಿಸಿರುವ ಇಡಿಗಂಟು (Lumpsum) ರೂಪದಲ್ಲಿ ಒದಗಿಸಲಾದ ಮೊತ್ತಗಳಿಗೆ ವಿವರವಾದ ಅಂದಾಜುಗಳನ್ನು ಸಿದ್ಧಪಡಿಸಿ ಕೆಲಸ ಆರಂಭಿಸುವ ಮುನ್ನ ಸಕ್ಷಮ ಅಧಿಕಾರಿಗಳಿಂದ ಅನುಮೋದನೆ ಪಡೆಯತಕ್ಕದ್ದು.
8. ಕೆಲಸ ಪ್ರಾರಂಭಿಸುವ ಮುನ್ನ ಕಾಮಗಾರಿ ನಡೆಯುವ ಸ್ಥಳವು ವಿವಾದಗಳಿಂದ ಮುಕ್ತವಾಗಿದೆಯೆಂದು ಪರಿಶೀಲಿಸತಕ್ಕದ್ದು.
9. ಕಾಮಗಾರಿಗೆ ಮಂಜೂರಾದ ಮೊತ್ತದ ಹಣವನ್ನು ಅದೇ ಕಾಮಗಾರಿಗೆ ಉಪಯೋಗಿಸತಕ್ಕದ್ದು.
10. ಸದರಿ ಉದ್ದೇಶಿಸಿರುವ ಕಾಮಗಾರಿಯು ಈ ಹಿಂದೆ ಯಾವುದೇ ಅನುದಾನದಲ್ಲಿ ಅಭಿವೃದ್ಧಿ ಪಡಿಸದೆ ಇರುವ ಬಗ್ಗೆ ಹಾಗೂ ಸದರಿ ಕಾಮಗಾರಿಯನ್ನು ಬೇರೆ ಅನುದಾನ / ಪ್ರಸ್ತಾವನೆಯಲ್ಲಿ ಸೇರಿಲ್ಲದೇ ಇರುವ ಬಗ್ಗೆ ಪರಿಶೀಲಿಸಿ ಕಾಮಗಾರಿ ನಿರ್ವಹಿಸುವ ಷರತ್ತಿಗೊಳಪಟ್ಟಿದೆ.
11. ಪ್ರಸ್ತಾಪಿಸಿರುವ ಕಾಮಗಾರಿಗೆ ಈ ಹಿಂದೆ ನಿರ್ವಹಿಸಿರುವ ಕಾಮಗಾರಿಯ ಡಿ.ಎಲ್.ಪಿ ಅವಧಿ ಪೂರ್ಣಗೊಂಡಿರುವ ಬಗ್ಗೆ ಪರಿಶೀಲಿಸಿ ನಂತರ ಕಾಮಗಾರಿ ಕೈಗೊಳ್ಳುವುದು.
12. ಕಾಮಗಾರಿಯಲ್ಲಿ ತೆರವುಗೊಳಿಸಲಾದ ಉಪಯುಕ್ತ ಮತ್ತು ಅನುಪಯುಕ್ತ ಸಾಮಗ್ರಿಗಳನ್ನು ನಿಯಮಾನುಸಾರ ವಿಲೇವಾರಿ ಮಾಡಿ ಹಣವನ್ನು ಪಾಲಿಕೆಗೆ ಜಮಾ ಮಾಡುವುದು.
13. ಕಂಡಿಕೆ (10) ರ ವರದಿಯನ್ವಯ ಪ್ರಸ್ತಾಪಿತ ಕಾಮಗಾರಿ ಅಂದಾಜು ಪಟ್ಟಿಗೆ ಅನುಮೋದನೆ ನೀಡಲಾಗಿದೆ.

18/12/23

ಅಧೀಕ್ಷಕ ಅಭಿಯಂತರರು
(ಯೋಜನೆ-ಕೇಂದ್ರ)
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಪ್ರತಿಯನ್ನು,

1. ಮುಖ್ಯ ಅಭಿಯಂತರರು (ಯೋಜನೆ-ಕೇಂದ್ರ) ರವರ ಮಾಹಿತಿಗಾಗಿ ಸಲ್ಲಿಸಿದೆ.
2. ಕಾರ್ಯಪಾಲಕ ಅಭಿಯಂತರರು (ಎಂಪಿಇಡಿ-ಕೇಂದ್ರ) ರವರಿಗೆ ಮುಂದಿನ ಸೂಕ್ತ ಕ್ರಮಕ್ಕಾಗಿ.
3. ಕಛೇರಿ ಕಡತಕ್ಕೆ.